ಇರಲಿಲ್ಲ. ಫೋನು ಮಾಡಿದವರು ಸತ್ತಿರುವುದು ಯಾರೋ 'ಮಿಸೆಸ್ ಸತ್ಪತಿ' ಎಂದು ಹೇಳಿದ್ದರಷ್ಟೆ. ದೆಹಲಿಯ ರಾಜಕಾರಣವೂ ಈ ಕುರಿತು ನನ್ನ ಮೇಲೆ ಒತ್ತಾಯ ಹೇರಿತೆಂದ ಮೇಲೆ ಯಾರೋ ಭಾರೀ ಕುಳವೆಂದು ಮಾತ್ರ ಅನಿಸಿದ್ದು ಹೌದು!

ಏರ್‌ಪೋರ್ಟ್‌ನಲ್ಲಿ ಕುಣಾಲ ಮೊಹಂತಿ ನನ್ನನ್ನು ಬರಮಾಡಿಕೊಂಡ. ನನಗೂ ನನ್ನ ತಂಡಕ್ಕೆಂದು ಮೂರು ಇನೋವಾಗಳನ್ನು ತರಲಾಗಿತ್ತು. ಒಂದೆರಡು ಮಿನಿಟು ನಿಂತು ಯಾರೆಲ್ಲಿ ಹೋಗುವುದೆಂದು ನಿರ್ಧರಿಸಿದ ಮೇಲೆ ನಾನು ಮತ್ತು ದೇವಾಂಗ ಅಂತೆಂಬ ನನ್ನ ಸಹಾಯಕ ಕುಣಾಲ ಮೊಹಂತಿಯ ಸ್ಕೋಡಾ ಹೊಕ್ಕು ಕುಳಿತೆವು. ದೇವಾಂಗ ಹಿಂದುಗಡೆ ಮತ್ತು ನಾನು ಮುಂದುಗಡೆ. ಕುಣಾಲ ಮೊಹಂತಿಯೇ ಸ್ಟಿಯರಿಂಗು ಹಿಡಿದ. 'ಸರ್... ನಾವು ಏನೇ ಮಾತಾಡಿದರೂ ಸ್ವಲ್ಪ ಗೌಪ್ಯವಾಗಿರಬೇಕು... ಇನ್ನೂ ಮರಣದ ಅಧಿಕೃತ ಪ್ರಕಟಣೆಯಾಗಿಲ್ಲ... ' ಎಂದು ಕಾರೂ ಚಾಲೂ ಮಾಡಿದ್ದೇ ಹೇಳಿದ. ದೊಡ್ಡ ಮನುಷ್ಯರ ಸಾವಿನಲ್ಲೂ ನೂರೆಂಟು ರಾಜಕೀಯವಿರುತ್ತಾದ್ದರಿಂದ, ಈ ವಿಷಯವೇನೂ ನನ್ನನ್ನು ಕಾಡಲಿಲ್ಲ. ಸುಮ್ಮನೆ ತಲೆದೂಗಿದೆ. 'ನಿಮ್ಮನ್ನು ಸೀದಾ ನನ್ನ ಬಾಸ್ ಹತ್ತಿರ ಕರೆದೊಯ್ಯುತೀನಿ... ಉಳಿದವರು ಹೊಟೆಲಿಗೆ ಹೋಗುತಾರೆ...' ಎಂದು ತಕ್ಷಣದ ಯೋಜನೆಯನ್ನು ವಿವರಿಸಿದ.

'ಈಗ ಎಲ್ಲಿ ಹೋಗುತೀವಿ?' ಎಂದು ಕೇಳಿದೆ.

'ಹಾಸ್ಪಿಟಲ್ಲಿಗೆ... ದೇಹ ಅಲ್ಲೇ ಇದೆ. ಮಿಸ್ಟರ್ ಹಿಮಾದ್ರಿ ಶಲ್ ರಿಸೀವ್ ಯೂ ದೇರ್...' ಅಂತಂದ ಕುಣಾಲ ಮೊಹಂತಿ, ಬಳಿಕ ನಿಧಾನವಾಗಿ ವಿಷಯಕ್ಕಿಳಿದ. ಸಾವು ತನ್ನ ಧಣಿಯ ಮಡದಿಯದೆಂದು ಹೇಳಿಕೊಂಡ. ಸ್ನಾನದ ಮನೆಯಲ್ಲಿ ಎಡವಿಬಿದ್ದು ಸತ್ತಿದ್ದಂತೆ. ಬೀಳುವಾಗ ಆಕೆಯ ಹಣೆಗೆ ವಾಷ್‌ಬೇಸಿನಿನ ಕಟ್ಟೆ ಹೊಡೆದು ಪ್ರಜ್ಞೆ ತಪ್ಪಿತಂತೆ. ಕೂಗಿ ಸಹಾಯ ಕೋರುವಷ್ಟು ಆಸ್ಪದವೇ ಇರಲಿಲ್ಲ... ಒಂದು ತಾಸಾದರೂ ಹೊರಬರದಿದ್ದಾಗ, ಅನುಮಾನದಿಂದ ಬಾಗಿಲೊಡೆದು ನೋಡುವ ಹೊತ್ತಿಗೆ ಪ್ರಾಣಪಕ್ಷಿ ಹಾರಿಹೋಗಿತ್ತಂತೆ... ಡೆತ್‌ಸರ್ಟಿಫಿಕೇಟಿನಲ್ಲಿ 'ಬ್ರಾಟ್ ಡೆಡ್' ಎಂದು ಬರೆಯಲಾಯಿತಂತೆ... ಇತ್ಯಾದಿ ಇತ್ಯಾದಿ.

ಕುಣಾಲ ಮೊಹಂತಿ ಇವೆಲ್ಲವನ್ನೂ ಕೇಳದೆಯೂ ಹೇಳಿದಾಗ, ಯಾಕೋ ಅಜೀಬನ್ನಿಸಿತು!

'ಆಕೆಯ ಹೆಸರು?' ಕೇಳಿದ ಮೇಲೆ ಕೇಳಬಾರದಿತ್ತನ್ನಿಸಿತು. ಯಾರಾದರೇನು, ಸದ್ಯಕ್ಕೆ ಶವವಷ್ಟೆ... ಅಂದುಕೊಂಡೆ! ಅಲ್ಲದೆ, 'ಅಸಹಜ ಸಾವನ್ನೂ ಸಹಜವೆನಿಸುವ ಹಾಗೆ ತಿದ್ದುವುದಷ್ಟೇ ನಿನ್ನ ಕೆಲಸ, ಕೋವಲನ್...' ಎಂದು ಆಡಿದ ತಪ್ಪನ್ನು ನನಗೆ ನಾನೇ ತಿದ್ದಿ ಹೇಳಿಕೊಂಡೆ.

'ಕಾಶ್ಯಪಿ ಸತ್ಪತಿ ಅಂತ, ಸರ್... ಶಿ ಈಸ್ ಎ ಸಿಟ್ಟಿಂಗ್ ಎಂಎಲ್‌ಎ ಫ್ರಮ್ ದಿ ನೇಬರಿಂಗ್ ಕನ್ಸಿಟುಎನ್ಸಿ...'

ಕಾಶ್ಯಪಿ! ಎಷ್ಟು ಚಂದದ ಹೆಸರು! ಯಾವುದೋ ಪುರಾಣದಲ್ಲಿನ ಗಂಡುಹೆಸರಂತೆ ಅನ್ನಿಸಿತು... ಅಲ್ಲದೆ, ಈಕೆ ಹಾಲಿ ಶಾಸಕಿ ಕೂಡ... ನಾನಂದುಕೊಂಡಂತೆ ಭಾರೀ ಕುಳವೇ!!

'ಐ ಸೀ... ಎಷ್ಟು ವಯಸ್ಸು?' ಮತ್ತೆ ಕೇಳಿದೆ.

'ನಲವತ್ತೆರಡಿರಬಹುದೇನೋ...' ಅಂತನ್ನುವಾಗ ಕುಣಾಲ ಮೊಹಂತಿಯ ಕೊರಳು ಕಟ್ಟಿ ಗದ್ಗದಿಸಿತು. 'ಚಿಕ್ಕ ವಯಸ್ಸು, ಸರ್... ನನ್ನ ಬಾಸ್ ಇಷ್ಟಪಟ್ಟು ಮದುವೆಯಾಗಿದ್ದರು. ನಿನ್ನೆ ಅಲ್ಲ ಮೊನ್ನೆ ಮದುವೆಯ ಹತ್ತನೇ ವರ್ಷ ಆಚರಿಸಿಕೊಂಡರು... ಆರು ವರ್ಷದ ಮಗು ಬೇರೆ ಇದೆ...' ಎಂದು ಮಾತು ಮುಂದುವರೆಸಿದ. 'ತಡವಾಗಿ ಮದುವೆ ಆಗಿದ್ದು, ಸರ್... ಮದುವೇನೇ ಬೇಡ ಅಂತಿದ್ದ ನನ್ನ ಬಾಸ್ ಈಕೆಗೆ ಮರುಳಾಗಿ ವರಿಸಿದರು... ಏನು ಮಾಡೋದು? ನಮ್ಮ ದುರದೃಷ್ಟ ಅಷ್ಟೆ...' ವಿಪರೀತ ಸ್ವಾಮಿನಿಷ್ಠೆಯಿಂದ ಆಡಿದ.